## ಕರ್ನಾಟಕ ಸರ್ಕಾರ

ಕ್ರಮಾಂಕ : ಡಿಪಿಎಆರ್ 213 ಕೆಒಎಲ್ 92

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ 22ನೇ ಡಿಸೆಂಬರ್ 1992.

**ಸುತ್ತೋಲೆ**

ವಿಷಯ :- ಕನ್ನಡ ಅನುಷ್ಠಾನ ಮತ್ತು ಡಾ: ಸರೋಜಿನಿ ಮಹಿಷಿ ವರದಿ ಶಿಫಾರಸ್ಸುಗಳನ್ನು ಕಾರ್ಯಗತಗೊಳಿಸುವ ಬಗ್ಗೆ- ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ ಸಮಿತಿ ಸಭೆಗಳಲ್ಲಿ ಪ್ರಗತಿ ಸಮಿಕ್ಷೆ

ಉಲ್ಲೇಖ :- 1) ಸರ್ಕಾರದ ಆದೇಶ ಸಂಖ್ಯೆ : ಡಿಪಿಎಆರ್ 25 ಕೆಒಎಲ್ 84, ದಿನಾಂಕ : 5-7-84.
2) ಅಧಿಸೂಚನೆ ಸಂಖ್ಯೆ : ಡಿಪಿಎಆರ್ 18 ಕೆಒಎಲ್ 91, ದಿನಾಂಕ : 6-2-1992.
3) ಆದೇಶ ಸಂಖ್ಯೆ : ಡಿಪಿಎಆರ್ 183 ಕೆಒಎಲ್ 92, ದಿನಾಂಕ : 11-11- 1992.

ಜಿಲ್ಲಾ ಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆಯುವ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ ಸಮಿಕ್ಷಾ ಸಮಿತಿ ಸಭೆಗಳಲ್ಲಿ ಕನ್ನಡ ಬಳಕೆ ಪ್ರಗತಿಯನ್ನು ಸಮೀಕ್ಷಿಸಿ, ಸಮೀಕ್ಷಾ ವರದಿಯನ್ನು ಕನ್ನಡ ಕಾವಲು ಸಮಿತಿ ಅಧ್ಯಕ್ಷರಿಗೆ ತಪ್ಪದೇ ಕಳುಹಿಸಬೇಕೆಂದು ಉಲ್ಲೇಖದಲ್ಲಿನ ಆದೇಶದಲ್ಲಿ ಆದೇಶಿಸಲಾಗಿತ್ತು (ಆದೇಶದ ಪ್ರತಿಯನ್ನು ಲಗತ್ತಿಸಿದೆ).

2) ಕನ್ನಡ ಕಾವಲು ಸಮಿತಿಗೆ ಬದಲಾಗಿ ಸರ್ಕಾರವು ಕನ್ನಡ ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸಲಾಗಿದ್ದು (ಉಲ್ಲೇಖ 2), ಕನ್ನಡ ಅನುಷ್ಠಾನ ಮತ್ತು ಸರ್ಕಾರ ಈಗಾಗಲೇ ಅಂಗಿಕರಿಸಿರುವ ಡಾ: ಸರೋಜಿನಿ ಮಹಿಷಿ ಸಮಿತಿಯ ಶಿಫಾರಸ್ಸುಗಳ ಕಾರ್ಯಚರಣೆ ಸಂಬಂಧ ಕಾರ್ಯಗಳನ್ನು ಸದರಿ ಪ್ರಾಧಿಕಾರಕ್ಕೆ ವಹಿಸಲಾಗಿದೆ. ಉಲ್ಲೇಖ 3ರಲ್ಲಿನ ಆದೇಶದಲ್ಲಿ ಪ್ರಾಧಿಕಾರದ ಉದ್ದೇಶಗಳನ್ನು ನೆರವೇರಿಸಲು ರಾಜ್ಯಮಟ್ಟದಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ವಿಭಾಗಮಟ್ಟದಲ್ಲಿ

ವಿಭಾಗಾಧಿಕಾರಿಗಳು, ಜಿಲ್ಲಾಮಟ್ಟದಲ್ಲಿ ಜಿಲ್ಲಾಧಿಕಾರಿ, ಉಪವಿಭಾಗಮಟ್ಟದಲ್ಲಿ ಉಪವಿಭಾಗಾಧಿಕಾರಿ, ಮತ್ತು ತಾಲ್ಲೂಕು ಮಟ್ಟದಲ್ಲಿ ತಹಶಿಲ್ದಾರ್ - ಇವರನ್ನು ಜವಾಬ್ದಾರರನ್ನಾಗಿ ಮಾಡಿದೆ.

3) ಇನ್ನುಮುಂದೆ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ ಸಮೀಕ್ಷಾ ಸಮಿತಿ ಸಭೆಗಳಲ್ಲಿ ಕನ್ನಡ ಅನುಷ್ಠಾನ ಮತ್ತು ಸರ್ಕಾರ ಈಗಾಗಲೇ ಅಂಗಿಕರಿಸಿರುವ ಡಾ: ಸರೋಜಿನಿ ಮಹಿಷಿ ವರದಿ ಶಿಫಾರಸ್ಸುಗಳನ್ನು ಜಾರಿಗೊಳಿಸುವ ಬಗ್ಗೆ ಆಗಿರುವ ಪ್ರಗತಿಯನ್ನುಸಮಿಕ್ಷಿಸಿ, ಸಮೀಕ್ಷಾ ವರದಿಯ ಪ್ರತಿಯನ್ನು ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ವಿಧಾನಸೌಧ, ಬೆಂಗಳೂರು - ಇವರಿಗೆ ತಪ್ಪದೆ ಕಳುಹಿಸಿಕೊಡಲು ಕೋರಲಾಗಿದೆ.

ಸಹಿ/-

**(ಸಣ್ಣ ನಂಜೇಗೌಡ),**

ಸರ್ಕಾರದ ಅಧಿನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,

(ಆಡಳಿತ ಕನ್ನಡ ಶಾಖೆ).